# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 76 (109) |
| ಮಾನ್ಯ ಸದಸ್ಯರ ಹೆಸರು | : | ಶ್ರೀ ನಾಗರಾಜು ಎಂ |
| ಉತ್ತರಿಸುವ ದಿನಾಂಕ | : | 17-08-2026 |
| ಉತ್ತರಿಸುವ ಸಚಿವರು | : | ಮಾನ್ಯ ಸಮಾಜ ಕಲ್ಯಾಣ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | 2021 ನೇ ಸಾಲಿನಲ್ಲಿ ಸಮಾಜ ಕಲ್ಯಾಣ ಇಲಾಖೆ, ಚಿಕ್ಕಬಳ್ಳಾಪುರ ಜಿಲ್ಲೆ ವತಿಯಿಂದ ಇಲಾಖಾ ವ್ಯಾಪ್ತಿಯ ಹಾಸ್ಟೆಲ್ ಗಳಿಗೆ Semi-Automatic chapathi making machine ಗಳನ್ನು ಕಿಯೋನಿಕ್ಸ್ ಸಂಸ್ಥೆಯಿಂದ ಖರೀದಿಸಲು ಕಾರ್ಯದೇಶ ನೀಡಿದ್ದು, ಕಿಯೋನಿಕ್ಸ್ ಸಂಸ್ಥೆ ಮಾರುಕಟ್ಟೆ ಬೆಲೆಗಿಂತ ಮೂರು ಪಟ್ಟು ಹೆಚ್ಚು ಮೊತ್ತದಲ್ಲಿ ಸರಬರಾಜು ಮಾಡಿರುತ್ತದೆ ಎಂದು ಸಿ.ಎ.ಜಿ ವರದಿ ಬಹಿರಂಗ ಪಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ.<br><br>ಸರ್ಕಾರದ ಆದೇಶ ಸಂಖ್ಯೆ: ಸಕಇ 228 ಪಕವಿ 2020, ದಿನಾಂಕ:01-04-2021 (2) ರಲ್ಲಿ ಇಲಾಖೆಯ ವಿದ್ಯಾರ್ಥಿ ನಿಲಯಗಳಿಗೆ ಅಗತ್ಯವಿರುವ Semi-Automatic chapathi making machine ಗಳನ್ನು ಜಿಲ್ಲಾಮಟ್ಟದಲ್ಲಿ ಕೆಟಿಪಿಪಿ ಕಾಯ್ದೆ 1999ರ ಕಲಂ 4(ಜಿ)ರನ್ವಯ ಕಿಯೋನಿಕ್ಸ್ ಸಂಸ್ಥೆಯ ಮೂಲಕ ಸರಬರಾಜು ಪಡೆಯಲು ಅನುಮತಿ ನೀಡಿ ಆದೇಶಿಸಿದೆ ಅದರಂತೆ ಚಿಕ್ಕಬಳ್ಳಾಪುರ ಜಿಲ್ಲೆಗೆ ರೂ.99.00 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ. |
| ಆ) | ಇದೇ ವರದಿಯಂತೆ ಮಂಡ್ಯ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳ 37 ಹಾಸ್ಟೆಲ್ ಗಳಲ್ಲಿ ವಿತರಿಸಲಾದ semi-Automatic chapathi making machine ಗಳನ್ನು ಪರಿಶೀಲಿಸಿದಾಗ ಸುಮಾರು 30 ಹಾಸ್ಟೆಲ್ ಗಳು ಈ ಉಪಕರಣಗಳನ್ನು ಬಳಸದೇ ಹಾಗೆಯೇ ಸ್ಟೋರ್ ರೂಂ ನಲ್ಲಿ ಇರಿಸಿದ್ದು, ಇದರಿಂದಾಗಿ ಸರ್ಕಾರಕ್ಕೆ ನಷ್ಟ ಉಂಟಾಗಿರುತ್ತದೆ ಎಂದು ವರದಿಯಲ್ಲಿ ತಿಳಿಸಿರುವುದು ನಿಜವೇ; | ಆಡಿಟ್ ತಂಡವು ವಿದ್ಯಾರ್ಥಿ ನಿಲಯಗಳಿಗೆ ಭೇಟಿ ನೀಡಿ, ಮಂಡ್ಯ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿನ ವಿದ್ಯಾರ್ಥಿ ನಿಲಯಗಳಲ್ಲಿ ತಪಾಸಣೆ ನಡೆಸಲಾದ ಸಂದರ್ಭದಲ್ಲಿ ಕೆಲವು ವಿದ್ಯಾರ್ಥಿ ನಿಲಯಗಳಲ್ಲಿ ಉಪಯೋಗಿಸದೇ ಇರುವ ಬಗ್ಗೆ ಪ್ರಸ್ತಾಪಿಸಿರುತ್ತಾರೆ ಇದು ಅಡುಗೆ ಸಿಬ್ಬಂದಿಗಳಿಗೆ ಯಂತ್ರದ ಉಪಯೋಗಿಸುವ ವಿಧಾನದ ಬಗ್ಗೆ ತರಬೇತಿ ನೀಡದೆ ಇರುವುದೇ ಕಾರಣವಾಗಿರುತ್ತದೆ.<br><br>ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ 25 ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಿಗೆ ರೂ.99,00,000/-ಗಳ ವೆಚ್ಚದಲ್ಲಿ ಕಿಯೋನಿಕ್ಸ್ ಸಂಸ್ಥೆಯಿಂದ ಚಪಾತಿ ಯಂತ್ರಗಳ ಖರೀದಿ ಮಾಡಿದ್ದು, ಈ ಪೈಕಿ 22 ಚಪಾತಿ ಯಂತ್ರಗಳಿಗೆ ಮಾತ್ರ ಅನುದಾವನ್ನು ಕಿಯೋನಿಕ್ಸ್ ಸಂಸ್ಥೆಗೆ ಬಿಡುಗಡೆ ಮಾಡಿದ್ದು, ಗೌರಿ ಬಿದನೂರು ತಾಲ್ಲೂಕಿನ 03 ಯಂತ್ರಗಳಿಗೆ ಅನುದಾನವನ್ನು ಬಿಡುಗಡೆ ಮಾಡಿರುವುದಿಲ್ಲ. ಸದರಿ ಯಂತ್ರಗಳನ್ನು ಉಪಯೋಗಿಸುವ ಬಗ್ಗೆ ಸಿಬ್ಬಂದಿಗಳಿಗೆ ತರಬೇತಿ |

| | | |
|---|---|---|
| | | ನೀಡಲಾಗಿದ್ದು, ಪ್ರಸ್ತುತ ಜಿಲ್ಲೆಯ 25 ಯಂತ್ರಗಳಲ್ಲಿ 22 ಯಂತ್ರಗಳು ಕಾರ್ಯನಿರ್ವಹಿಸಲಾಗುತ್ತಿದ್ದು, ಚಪಾತಿ ತಯಾರಿಸಲು ಉಪಯೋಗಿಸಲಾಗುತ್ತಿರುವ ಬಗ್ಗೆ ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ ಚಿಕ್ಕಬಳ್ಳಾಪುರ ರವರು ಪ್ರಸ್ತುತ ವರದಿ ಸಲ್ಲಿಸಿರುತ್ತಾರೆ.<br><br>ಮಂಡ್ಯ ಜಿಲ್ಲೆಯ ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ ರವರು ಜಿಲ್ಲೆಯ 26 ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಿಗೆ ರೂ.99,71,000/-ಗಳ ವೆಚ್ಚದಲ್ಲಿ ಕಿಯೋನಿಕ್ಸ್ ಸಂಸ್ಥೆಯಿಂದ ಚಪಾತಿ ಯಂತ್ರಗಳ ಖರೀದಿ ಮಾಡಿ ಪೂರೈಕೆ ಮಾಡಿದ್ದು, ಸದರಿ ಯಂತ್ರಗಳನ್ನು ಬಳಕೆ ಮಾಡುವ ವಿಧಾನದ ಬಗ್ಗೆ ಎಲ್ಲಾ ನಿಲಯಗಳ ಅಡುಗೆ ಸಿಬ್ಬಂದಿಗಳಿಗೆ ಅರಿವು ಮೂಡಿಸಲಾಗಿರುತ್ತದೆ ಅದರಂತೆ ಎಲ್ಲಾ ವಿದ್ಯಾರ್ಥಿನಿಲಯಗಳಲ್ಲಿ ಸದರಿ ಯಂತ್ರಗಳನ್ನು ಸಮರ್ಪಕವಾಗಿ ಚಪಾತಿ ತಯಾರಿಸಲು ಬಳಕೆ ಮಾಡಲಾಗುತ್ತಿರುವ ಬಗ್ಗೆ ವರದಿ ಸಲ್ಲಿಸಿರುತ್ತಾರೆ. |
| ಇ) | ಮಾರುಕಟ್ಟೆ ಬೆಲೆಗಿಂತ ಹೆಚ್ಚಿನ ಮೊತ್ತಕ್ಕೆ ಮೇಲ್ಕಂಡ ಉಪಕರಣಗಳನ್ನು ಕಿಯೋನಿಕ್ಸ್ ಸಂಸ್ಥೆಯಿಂದ ಖರೀದಿಸುವ ಅವಶ್ಯಕತೆ ಉಂಟಾಗಿತ್ತಾ; ಮತ್ತು ಈ ಉಪಕರಣಗಳನ್ನು ನಿಯಮಬಾಹಿರವಾಗಿ ಅಧಿಕಾರಿಗಳಿಂದ ಖರೀದಿಸಲಾಗಿದೆಯೇ; ಸರ್ಕಾರ ಈ ಕುರಿತು ಕೈಗೊಂಡಿರುವ ಕ್ರಮವೇನು? | ಆದೇಶದಲ್ಲಿ KTPP ಕಾಯ್ದೆ 1999 ನಿಯಮ 2000 ರಂತೆ 4(g) ವಿನಾಯಿತಿ ಹೊಂದಿರುವ ಸಂಸ್ಥೆಗಳ ಮೂಲಕ ಖರೀದಿಸುವಾಗ ಆರ್ಥಿಕ ಇಲಾಖೆ ನಿರ್ದೇಶನದಂತೆ ಸಮಂಜಸ ದರಗಳಲ್ಲಿ ಸಂಗ್ರಹಿಸುವುದು ಸಂಗ್ರಹಣಾ ಸಂಸ್ಥೆಗಳು ಖಾತರಿಪಡಿಸಬೇಕಾಗಿರುತ್ತದೆ. ಈ ಬಗ್ಗೆ ಮೊದಲನೇ ಹಂತದಲ್ಲಿ KEONICS ಸಂಸ್ಥೆಯವರು ಟೆಂಡರ್ ಮಾಡಿ ಪ್ರಸ್ತಾಪಿತ ದರಗಳನ್ನು ಖಾತ್ರಿಪಡಿಸಿಕೊಂಡು ನಂತರ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಬೇಕಾಗಿರುತ್ತದೆ.<br><br>KEONICS ಸಂಸ್ಥೆಯು ರಾಜ್ಯ ಸರ್ಕಾರಿ ಸಾಮ್ಯದ ಸಂಸ್ಥೆಯಾಗಿರುವುದರಿಂದ ಹಾಗೂ 4(g) ವಿನಾಯಿತಿ ನೀಡಿರುವುದರಿಂದ, KEONICS ರವರ 4(g) ವಿನಾಯಿತಿಗೆ ದರಸಂಧಾನ ಮಾಡಲು ಅವಕಾಶವಿಲ್ಲದೇ ಇರುವುದರಿಂದ ಸಮಂಜಸ ದರಗಳನ್ನು ಮಾತ್ರ ಖಾತ್ರಿ ಮಾಡಿಸಿಕೊಂಡು ಆದೇಶ ನೀಡಲು ಸೂಚಿಸಲಾಗಿರುತ್ತದೆ. |

**ಸಕಇ 752 ಪಕವಿ 2026**

(ಕೆ.ಹೆಚ್.ಮುನಿಯಪ್ಪ)
**ಸಮಾಜ ಕಲ್ಯಾಣ ಸಚಿವರು**